ಕಾಮಗಾರಿಗಳನ್ನು ತೆಗೆದುಕೊಳ್ಳಲು ಏರ್ಪಾಡು ಮಾಡಲಾಗುತ್ತದೆಂದು ಹೇಳಿ ಹೋದರು. ಚೀಫ್ ಸೆಕ್ರೆಟರಿಯವರು ಮತ್ತು ಜಿಲ್ಲಾಧಿಕಾರಿಯವರು, ಮುಂಬಯಿ, ಮಹಾರಾಷ್ಟ್ರ ಮತ್ತು ಬೆಂಗಳೂರು ಕಡೆಗೆ ಕೂಲಿ ಹುಡುಕಿಕೊಂಡು ಹೋಗುವ ಜನರನ್ನು ತಡೆದು ನಾವು ನಿಮಗೆ ಇಲ್ಲೇ ಕೆಲಸ ಕೊಡುತ್ತೇವೆಂದು ಹೇಳಿ ಹೋಗುವುದನ್ನು ತಡೆದರು. ಸೆಂಟ್ರಲ್ ಟೀಮ್ ಬಂದು ಹೋದ ಮೇಲೆ ಜನಗಳಿಗೆ 15 ದಿವಸ ಕೆಲಸ ಕೊಟ್ಟು ನಂತರ ಕೆಲಸ ಕೊಡಲಿಲ್ಲ. ಈಗ ನಾನು ಆ ಭಾಗಗಳಿಗೆ ಹೋದರೆ, ಜನರುಗಳಿಗೆ ಕೆಲಸ ಕೊಡಿಸಲಿಲ್ಲ, ಕುಡಿಯಲು ನೀರು ಕೊಡಿಸಲಿಲ್ಲವೆಂದು ಅಲ್ಲಿನ ಹೆಣ್ಣು ಮಕ್ಕಳು ಖಾಲಿ ಕೊಡಗಳನ್ನು ಎತ್ತಿಕೊಂಡು ನನ್ನ ಘೆರಾವ್ ಮಾಡಿದ್ದರು. ಇದರಿಂದ ನನಗೆ ಬಹಳ ಅವಮಾನವಾಗಿದೆಯೆಂದು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಇಂತಹ ಸಮಯದಲ್ಲಿ ನಾನು ಏಕೆ ಎಂ.ಎಲ್.ಎ ಆದೆ ಎಂದು ನನಗೆ ಬಹಳ ಬೇಜಾರಾಗಿದೆ. ನಾನು ಹೊಸದಾಗಿ ಎಂ.ಎಲ್.ಎ. ಆಗಿದ್ದೇನೆ, ನಮ್ಮ ಭಾಗದ ಕಷ್ಟಗಳ ಬಗ್ಗೆ ನಾನು ಪದೇ ಪದೇ ಸರ್ಕಾರದಲ್ಲಿ ಹೇಳಿಕೊಂಡಿದ್ದರೂ ಯಾವುದೇ ನಿಗಾ ವಹಿಸಿಲ್ಲ.

+ ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು):– ಮಾನ್ಯ ಶಾಸಕರು ಈ ವಿಚಾರದಲ್ಲಿ ಬಹಳ ಕಳಕಳಿಯಿಂದ ಗಂಭೀರವಾಗಿ ಪ್ರಸ್ತಾಪ ಮಾಡಿದ್ದಾರೆ. ಈ ಮಾರ್ಚ್ ತಿಂಗಳಿನಲ್ಲಿ ಪರಿಹಾರ ಹಣವಾಗಿ ಕೇಂದ್ರ ಸರ್ಕಾರದಿಂದ 20 ಕೋಟಿ ರೂಪಾಯಿಗಳು ಬಂದಿದೆ. ಅದರಲ್ಲಿ ಒಂದು ಕೋಟಿ 20 ಲಕ್ಷ ರೂಪಾಯಿಗಳನ್ನು ಗುಲ್ಬರ್ಗಾ ಜಿಲ್ಲೆಗೆ ಬಿಡುಗಡೆ ಮಾಡಿದ್ದೇವೆ. ಇದರ ಜೊತೆಗೆ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ 8 ಕೋಟಿ ರೂಪಾಯಿಗಳಲ್ಲಿ ಸುಮಾರು 30 ಲಕ್ಷ ಅಥವಾ 40 ಲಕ್ಷ ರೂಪಾಯಿಗಳೂ ಗುಲ್ಬರ್ಗಾ ಜಿಲ್ಲೆಗೆ ಬರುತ್ತದೆ. ಮಾನ್ಯ ಸದಸ್ಯರು ಹೇಳುವಂಥ ಕಡೆ ತಕ್ಷಣದಲ್ಲೇ ಕೆಲಸವನ್ನು ಪ್ರಾರಂಭ ಮಾಡಿ ಜನರುಗಳಿಗೆ ಕುಡಿಯುವ ನೀರನ್ನು ಒದಗಿಸಿಕೊಡಬೇಕೆಂದು ಇದೇ ದಿವಸವೇ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡುತ್ತೆನೆ.

(ಅ) ತೀರ್ಥಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಬಡಮಹಿಳೆ ಮೇಲೆ ನಡೆದ ದೌರ್ಜನ್ಯ

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):– ಮಾನ್ಯ ಅಧ್ಯಕ್ಷರೇ, ಇದೇ ತಿಂಗಳು 8ನೇ ತಾರೀಖು ವಿಶ್ವ ಮಹಿಳಾ ದಿನಾಚರಣೆ ನಡೆಯಿತು. ಆ ದಿವಸ ವಿಶ್ವದ ಅನೇಕ ಮಹಿಳಾ ಸಂಘಟನೆಗಳು ಮಹಿಳೆಯರ ಹಕ್ಕುಬಾಧ್ಯತೆ ಬಗ್ಗೆ ಹೋರಾಟ ಮಾಡಿರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಇದೇ ದಿವಸ ನಮ್ಮ ತಾಲ್ಲೂಕಿನಲ್ಲಿ ಒಬ್ಬ ಬಡ ಮಹಿಳೆ ಮೇಲೆ ಮಹಿಳೆಯರೇ ದೌರ್ಜನ್ಯ ನಡೆಸಿ ಅವಳನ್ನು ಹೆಣವಾಗಿ ಮಾಡಿರುವ ಒಂದು ಧಾರಣ ಘಟನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತೀರ್ಥಹಳ್ಳಿ ತಾಲ್ಲೂಕಿನ ಎಡಮನೆ ಗ್ರಾಮದ ನಾಗಪ್ಪಗೌಡ ಎನ್ನುವರನ ಹೆಂಡತಿ ಶ್ರೀಲತಾ ಎನ್ನುವ ಹೆಣ್ಣುಮಗಳು 4ನೇ ತಾರೀಖು ತನ್ನ ಎರಡನೆಯ ಹೆರಿಗೆಗಾಗಿ ತೀರ್ಥಹಳ್ಳಿ ಸರ್ಕಾರಿ ಆಸ್ಪತ್ರೆಗೆ ಬಂದು ಒಳ ರೋಗಿಯಾಗಿ ಅಡ್ಮಿಟ್ ಆಗಿದ್ದಳು. 8ನೇ ತಾರೀಖಿನ ದಿವಸ ನಾನು ಮಗುವಿನ ಜೊತೆ ಹೋಗುವ ಬದಲು ಹೆಣವಾಗಿ ಹೋಗುತ್ತೇನೆ ಎನ್ನುವ ಕಲ್ಪನೆ ಆಕೆಗೆ ಇರಲಿಲ್ಲ. ವೈದ್ಯರು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಅಲ್ಲಿದ್ದಂಥ ಮಹಿಳಾ ಸಿಬ್ಬಂದಿಯವರು, ಲಂಚದ ಹಣಕ್ಕಾಗಿ ಆಕೆಗೆ ಹೆರಿಗೆ ನೋವು ಇಲ್ಲದೇ ಇದ್ದರೂ ಕೂಡಾ,

ಆಕೆಯನ್ನು ಬಲಾತ್ಕಾರವಾಗಿ ಒಳಗೆ ಕರೆದುಕೊಂಡು ಹೋಗಿ ಬಲಾತ್ಕಾರವಾಗಿ ಹೆರಿಗೆ ಮಾಡಿಸುವಂಥ ಪ್ರಯತ್ನ ಮಾಡಿದ್ದಾರೆ. ನನಗೆ ಇನ್ನೂ ಹೆರಿಗೆ ನೋವು ಬಂದಿಲ್ಲವಾದ್ದರಿಂದ ದಯವಿಟ್ಟು ನನಗೆ ತೊಂದರೆ ಕೊಡಬೇಡಿ ಎಂದು ಆಕೆ ಸಿಬ್ಬಂದಿಯವರಲ್ಲಿ ಬೊಬ್ಬೆ ಹೊಡೆದಾಗ ಆ ಶಬ್ದ ಕೇಳಿಸಿಕೊಂಡು ಇತರ ಪೇಷೆಂಟ್ಸ್ ಅಲ್ಲಿಗೆ ಹೋಗಿ ದಯವಿಟ್ಟು ಅವಳನ್ನು ಹೊರಗೆ ಬಿಡು ಎಂದು ಕೇಳಿಕೊಂಡರೂ ಬಿಡದೆ ಒಂದು ಗಂಟೆ ಕಾಲ ಆಕೆಯ ಮೇಲೆ ರಾಕ್ಷಸೀಕೃತ್ಯದ ದೌರ್ಜನ್ಯ ನಡೆಸಿದ ಮೇಲೆ ಬಲವಂತವಾಗಿ ಆಕೆಗೆ ಹೆರಿಗೆ ಮಾಡಿಸಿದ್ದಾರೆ. ಹೊರಗಡೆ ಕಾಯುತ್ತಿದ್ದ ಆಕೆಯ ಅತ್ತಿಗೆ ಮಗುವು ಹೆಣ್ಣೊ ಗಂಡೋ ಎಂದು ಕೇಳಿದಾಗ, ಮಗು ತೋರಿಸಬೇಕಾದರೆ ಹಣ ಕೊಡಬೇಕೆಂದು ಕೇಳಿದ್ದಾರೆ. ಅವರು ಬಡವರಾಗಿದ್ದರೂ ಮಗುವನ್ನು ನೋಡುವ ಆಸೆಯಿಂದ 200 ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ 200 ರೂಪಾಯಿಗಳು ಸಾಕಾಗುವುದಿಲ್ಲವೆಂದು ತೆಗೆದು ಎಸೆದ ಮೇಲೆ 350 ರೂಪಾಯಿಗಳನ್ನು ಕೊಟ್ಟಾದ ಮೇಲೆ ಮಗವನ್ನು ತಂದು ಹೊರಗಡೆ ತೋರಿಸಿದ್ದಾರೆ. ಮಗುವನ್ನು ನೋಡಿಯಾದ ಮೇಲೆ ಒಳಗಡೆ ಹೋಗಿ ಬಾಣಂತಿಯನ್ನು ನೋಡಲು ಹೋದಾಗ ಆಕೆಯು ರಕ್ತದ ಮಡುವಿನಲ್ಲಿ ಬಿದ್ದಿರುವುದನ್ನು ಕಂಡಿದ್ದಾರೆ. ಹೆರಿಗೆಯ ಟೇಬಲ್ ಮೇಲೆ ಶವವಾಗಿ ಮಲಗಿದ್ದಾಳೆ. ಆಮೇಲೆ ಗಡಿಬಿಡಿಯಲ್ಲಿ ಡಾಕ್ಟರು ಬಂದು, ಆಕೆ ಸತ್ತುಹೋಗಿದ್ದಾಳೆಂದು ರಿಪೋರ್ಟ್ ಕೊಟ್ಟಿದ್ದಾರೆ. ಆಕೆಯ ಮನೆಯವರನ್ನು ಸಮಾಧಾನಪಡಿಸಿ ರಾತ್ರಿ 12 ಗಂಟೆಗೆ ಶವವನ್ನು ಅವರ ಮನೆಗೆ ಸಾಗಿಸಿ ಸುಡಿಸುತ್ತಾರೆ. ಸರ್ಕಾರಿ ಆಸ್ಪತ್ರೆಗೆ ಹೆರಿಗೆಗೆಂದು ಬಂದು ಸೇರಿದ ಬಡ ಮಹಿಳೆ ಮೇಲೆ ನಡೆದ ದೊಡ್ಡ ದೌರ್ಜನ್ಯವಾಗಿದೆ.

ಅಧ್ಯಕ್ಷರು:- ಡೆತ್ ಆದ ಮೇಲೆ ಹೆಣವನ್ನು ಸುಟ್ಟಿದ್ದಾರೆಯೇ ಅದರ ಬಗ್ಗೆ ಕಂಪ್ಲೇಂಟ್ ಕೊಟ್ಟಿದ್ದಾರೆಯೇ ?

ಶ್ರೀ ಅನಗ ಜ್ಞಾನೇಂದ್ರ:- ಅವರು ಈಗ ಕಂಪ್ಲೇಂಟ್ ಕೊಡುತ್ತಿದ್ದಾರೆ. ಅವರು ಬಹಳ ಬಡವರಾಗಿರುವುದರಿಂದ ಅವರು ಇನ್ನೂ ಕಂಪ್ಲೇಂಟ್ ಕೊಟ್ಟಿರಲಿಲ್ಲ.

ಅಧ್ಯಕ್ಷರು:- ಬಡವರಾಗಲೀ, ಶ್ರೀಮಂತರಾಗಲೀ ಕಂಪ್ಲೇಂಟ್ ಕೊಡಬೇಕಾಗುತ್ತದೆ.

ಶ್ರೀ ಅಂಗ ಜ್ಞಾನೇಂದ್ರ:- ಇವರ ಬಗ್ಗೆ ಅವರಿಗೆ ಗೊತ್ತಿರಲಿಲ್ಲ.

ಅಧ್ಯಕ್ಷರು:- ನೀವು ಪಾಯಿಂಟನ್ನು ಮಿಸ್ ಮಾಡಬೇಡಿ. ಈ ಘಟನೆ ನಡೆದು ಆ ಹೆಣ್ಣು ಮಗಳು ತೀರಿಕೊಂಡಾದ ಮೇಲೆ ಅವರ ಮನೆಯ ಪದ್ಧತಿ ಪ್ರಕಾರ ಹೆಣವನ್ನು ಹೂಳತಕ್ಕಂಥಾದ್ದ ಅಥವಾ ಸುಡತಕ್ಕಂಥಾದ್ದಾ?

ಶ್ರೀ ಅಂಗ ಜ್ಞಾನೇಂದ್ರ:- ಸುಡತಕ್ಕಂಥಾದ್ದು.

ಅಧ್ಯಕ್ಷರು:- ಸರಿ.

ಶ್ರೀ ಅನಗ ಜ್ಞಾನೇಂದ್ರ:- ಡಾಕ್ಟರು ಮತ್ತು ಸಿಬ್ಬಂದಿ ವರ್ಗದವರು ಅವರ ಮನೆಯವರ ಕೈಯಲ್ಲಿ ಏನೋ ಬರೆಸಿಕೊಳ್ಳಲಾಯಿತು, ರಕ್ತಸ್ರಾವದಿಂದ ಅಸ್ವಾಭಾವಿಕವಾಗಿ ಸತ್ತು ಹೋಗಿದ್ದಾಳೆಂದು ಮನೆಗೆ ಹೋಗುವಷ್ಟು ಕರಾರು ಮಾಡಿಸಿದ್ದಾರೆ. ಅವರು ಅಮಾಯಕ ಜನವಾಗಿರುವುದರಿಂದ ಅವರಿಗೆ ಏನೂ ಗೊತ್ತಾಗದೆ ಅದಕ್ಕೆ ಸುಟ್ಟುಹಾಕಿದ್ದಾರೆ. ಆನಂತರ, ಎಲ್ಲಾ ಜನರಿಗೂ ಗೊತ್ತಾಗಿ,

ಇವತ್ತಿನ ದಿವಸ ಮಹಿಳಾ ಸಂಘಟನೆಯವರು ತೀರ್ಥಹಳ್ಳಿ ಆಸ್ಪತ್ರೆ ಮುಂದೆ ಪ್ರತಿಭಟನೆ ಮಾಡುತ್ತಿದ್ದಾರೆ. ಆಧುನಿಕವಾಗಿರತಕ್ಕಂಥ ಈ ಕಾಲದಲ್ಲಿ ಹೆರಿಗೆಗೆ ಬಗುವಂಥ ಮಹಿಳೆಯರು ಸಾಯುವಂಥ ಪರಿಸ್ಥಿತಿ ಸರಿಯಲ್ಲ. ಅದರಲ್ಲೂ ಈಕೆ ಎರಡನೇ ಹೆರಿಗೆಗೆ ಆಸ್ಪತ್ರೆಗೆ ಬಂದಿದ್ದಾಳೆ. ತೀರ್ಥಹಳ್ಳಿ ಆಸ್ಪತ್ರೆಯಲ್ಲಿ ಸಾಕಷ್ಟು ಸೌಲಭ್ಯವಿದ್ದರೂ ಆಕೆ ಸತ್ತಿದ್ದಾಳೆ.

ಅಧ್ಯಕ್ಷರು:- ಒಟ್ಟಿನಲ್ಲಿ ನಿಮ್ಮ ಕಂಪ್ಲೇಂಟ್ ಏನು?

ಶ್ರೀ ಆರಗ ಜ್ಞಾನೇಂದ್ರ:- ವೈದ್ಯರು ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಅಲ್ಲಿದ್ದಂಥ ದಾದಿಯರು ಮತ್ತು ಆಯಾ ಸೇರಿ ಆಕೆಗೆ ಬಲವಂತವಾಗಿ ಹೆರಿಗೆ ಮಾಡಿಸಿರುವುದರಿಂದ ರಕ್ತಸ್ರಾವವಾಗಿ ಸಾಕಷ್ಟು ರೀತಿಯಿಂದ ತೊಂದರೆಯಾಗಿದೆ. ಆಕೆ ಕಿರಿಚಿದರೂ, ಕೂಗಿದರೂ ಬಿಡದೆ ಆಕೆ ಮೇಲೆ ದೌರ್ಜನ್ಯ ಮಾಡಿದ್ದಾರೆ. ಯಾರು ಈ ರೀತಿ ಬಲವಂತವಾಗಿ ಆಕೆಗೆ ಹೆರಿಗೆ ಮಾಡಿಸಲು ಕಾರಣವಾಗಿದ್ದಾರೋ ಅವರ ಮೇಲೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು. ನಮ್ಮ ತಾಲ್ಲೂಕಿನ ಆಸ್ಪತ್ರೆಯಲ್ಲಿ ಇದೇ ತರಹ ಎರಡು ಮೂರು ಘಟನೆಗಳು ಜರುಗಿರುವುದರಿಂದ ಇನ್ನು ಮುಂದೆ ಈ ರೀತಿ ಆಗದ ಹಾಗೆ ತನಿಖೆ ನಡೆಸಿ ಸಂಬಂಧಪಟ್ಟವರ ಮೇಲೆ ಗಂಭೀರವಾದ ಶಿಕ್ಷೆ ವಿಧಿಸಬೇಕು. ಆಮೇಲೆ, ಸತ್ತಿರುವ ಆಕೆಯ ಕುಟುಂಬವರ್ಗದವರಿಗೆ ಪರಿಹಾರ ಕೊಡಬೇಕು. ವಿಚಾರಣೆ ಮಾಡುವಂಥ ಕಾಲದಲ್ಲಿ ಇನ್ ಪೇಷೆಂಟ್ ಆಗಿದ್ದು ಆ ಸಂದರ್ಭದಲ್ಲಿ ಈ ಕೃತ್ಯವನ್ನು ನೋಡಿರುವಂಥಹವರ ಹೇಳಿಕೆಯನ್ನೂ ಪಡೆಯಬೇಕೆಂದು ಕೋರುತ್ತೇನೆ.

+ ಡಾ: ಹೆಚ್.ಪಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ: 8-3-1998 ರಂದು ಶ್ರೀಲತಾ ಅನ್ನತಕ್ಕಂಥ ಪೇಷೆಂಟ್ ತೀರ್ಥಹಳ್ಳಿ ಜನರಲ್ ಆಸ್ಪತ್ರೆಗೆ ಎರಡನೇ ಹೆರಿಗೆಗಾಗಿ ದಾಖಲಾಗಿದ್ದಳು. ಶ್ರೀಮತಿ ಜಲೀನ ಮತ್ತು ಶ್ರೀಮತಿ ಗುಣವತಿ ಎನ್ನತಕ್ಕಂಥ ನರ್ಸಸ್ ಜೊತೆ ಗೈನಕಾಲಜಿಸ್ಟ್ ಉಮಾವೀಣಿಯವರೂ ಕೂಡಾ ಪರೀಕ್ಷೆ ಮಾಡಿ ಅದೇ ದಿನ ಸಂಜೆ 4 ಗಂಟೆ 23 ನಿಮಿಷಕ್ಕೆ ಹೆಣ್ಣು ಮಗುವಿನ ಹೆರಿಗೆ ಮಾಡಿಸಿದ್ದಾರೆ. ಅವರಿಗೆ ಎರಡನೆ ಹೆರಿಗೆಯಾಗಿರುವುದರಿಂದ ಸಿಂಪಲ್ ಡೆಲಿವರಿಯೇ ಆಗಿದೆ, ಆದರೆ ಸಿಂಪಲ್ ಸರ್ಜರಿ ಮಾತ್ರ ಮಾಡಲಾಗಿದೆ. ಪ್ಲಾಸೆಂಟಾ ಬಂದ ಮೇಲೆ ಅವಳ ರಕ್ತಸ್ರಾವವಾಗಿದ್ದರಿಂದ ತಕ್ಷಣ ವೈದ್ಯರಿಗೆ ಹೇಳಿಕಳುಹಿಸಲಾಗಿದೆ. ಅವರು ಬಂದ ಮೇಲೆ ಬ್ಲಡ್ ಮೇಲೆ ಬ್ಲಡ್ ಕೊಡುವುದರ ಜೊತೆಗೆ ಗ್ಲೂಕೋಸ್ ಕೂಡ ಕೊಟ್ಟಿದ್ದಾರೆ. ಇಷ್ಟೆಲ್ಲಾ ಮಾಡಿದರೂ ರಕ್ತಸ್ರಾವ ಹೆಚ್ಚಾಗಿ ಬಾಣಂತಿಯನ್ನು ಉಳಿಸಿಕೊಳ್ಳುವುದಕ್ಕಾಗಲಿಲ್ಲ. ಆಮೇಲೆ, ಇದರ ಬಗ್ಗೆ ಡಿಎಸ್ ಆರೋಗ್ಯ ಅಧಿಕಾರಿಯವರೂ ತನಿಖೆ ಮಾಡಿ ಇದರಲ್ಲಿ ನೆಗ್ಲಿಜೆನ್ಸ್ ಏನೂ ಆಗಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ.

ಸಾಮಾನ್ಯವಾಗಿ ನೋವು ಇಲ್ಲದೆ ಇದ್ದರು ಕೃತಕವಾಗಿ ನೋವು ಬರಿಸತಕ್ಕಂಥ ಈಗಲೇ ಹೆರಿಗೆ ಆಗಬೇಕು ಎಂದು ಹೇಳತಕ್ಕಂಥದ್ದು ವೈದ್ಯರಿಗೆ ಅಥವಾ ವೈದ್ಯಕೀಯೇತರ ಸಿಬ್ಬಂದಿಗೆ ಇಲ್ಲ. ನ್ಯಾಚುರಲ್ ಲೇಬರ್ ಪೆಯಿನ್ ಬರದಿದ್ದರೆ ಟೆಂಪೊರರಿ ಮೆಥೆಡ್ ಅವ್ಯ ಮಾಡಿ ಮಸಾಜ್ ಮಾಡಿ they try to get the labour pain. this is one of the procedures adopted in medical pracice. ಆ ರೀತಿಯಾಗಿ ಮಾಡುವಾಗ, ನೋವು ಬಂದು

ಹೆಂಗೆಯಾಗಿದೆ, ಹೆಣ್ಣುಮಗು ಆಗಿದೆ. ಎಲ್ಲಾ ಪ್ರಯತ್ನವನ್ನು ಕೂಡ ಮಾಡಿದ್ದಾರೆ. Blood transfusion ಕೊಟ್ಟಿದ್ದಾರೆ. We say PPH for this and it is a serious matter. ಪೋಸ್ಟ್‌ಮಾರ್ಟಮ್ ನಂತರ ಪ್ಲಾಸೆಂಟಾ ಹೊರಗೆ ಬಂದ ಮೇಲೆ ರೋಗಿಗೆ ರಕ್ತಸ್ರಾವ ಆಗತಕ್ಕಂಥದ್ದು ಸಹಜವಾಗಿರುತ್ತದೆ. ರಕ್ತಸ್ರಾವದಿಂದ ಶಾಕ್ ಆಗಿ ಸಾವು ಆಗಬಹುದು. This is one of the possibility. ಇಂತಹ ಎಲ್ಲಾ ಪ್ರಯತ್ನಗಳನ್ನು ಮಾಡಿದರೂ ಕೂಡ ಅಲ್ಲಿರತಕ್ಕಂಥ ವೈದ್ಯಕೀಯೇತರ ಸಿಬ್ಬಂದಿಗಳು ನೆಗ್ಲಿಜೆನ್ಸ್ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ನಮ್ಮ ಹಿರಿಯ ಅಧಿಕಾರಿಗಳು ಅಲ್ಲಿಗೆ ಹೋಗಿ ನೆಗ್ಲಿಜೆನ್ಸ್ ಆಗಿಲ್ಲವೆಂದು ವರದಿಯನ್ನು ನಮಗೆ ದೂರವಾಣಿ ಮೂಲಕ ರಾತ್ರಿ ಕಳುಹಿಸಿರುತ್ತಾರೆ. ರಾತ್ರಿ 10ರವರೆಗೆ ಕುಳಿತುಕೊಂಡು ಖಿದ್ದಾಗಿ ವರದಿಯನ್ನು ತರಿಸಿರುತ್ತೇವೆ. ಇನ್ನು ಅವರಿಗೆ ಅವರ ನಡವಳಿಕೆಯಿಂದ ಅನುಮಾನಗಳು ಉಂಟಾಗಿದ್ದರೆ ಹಿರಿಯ ಶೂಶ್ರೂಷಕ ತಜ್ಞರನ್ನು ಕಳುಹಿಸಿ ಸಮಗ್ರವಾದಂಥ ತನಿಖೆಯನ್ನು ಮಾಡಿ ಅಲ್ಲಿ ನೆಗ್ಲಿಜೆನ್ಸ್ ಮತ್ತು ಬೇರೆ ರೀತಿಯ ಕೃತಕ ರೀತಿಯ ಕರ್ತವ್ಯಗಳನ್ನು ಎಸಗಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಸಮಗ್ರವಾದ ವರದಿಯನ್ನು ತರಿಸಿಕೊಂಡು ಕ್ರಮವನ್ನು ಕೈಗೊಳ್ಳುತ್ತೇನೆಂದು ತಿಳಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ:- ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಇಡೀ ರಾಜ್ಯದ ಮಹಿಳೆಯರಿಗೆ ನೀವು ಧೈರ್ಯವನ್ನು ಕೊಡಬೇಕಾದಂಥವರು ನನ್ನ ತಾಲ್ಲೂಕಿನಲ್ಲಿ ಇಂತಹ ಕೃತ್ಯ ಎಸಗಿದೆ 100 ರಿಂದ 150 ಜನ ಆ ಕೃತ್ಯವನ್ನು ನೋಡಿದವರು ಇದ್ದಾರೆ. ಈ ಸದನದಲ್ಲಿ ತಪ್ಪು ಮಾಹಿತಿಯನ್ನು ತಮ್ಮ ಅಧಿಕಾರಿಗಳ ಮುಖಾಂತರ ಪಡೆದು ಮಾನ್ಯ ಸಚಿವರು ಕೊಡುವಂಥದ್ದು ಒಳ್ಳೆಯದಲ್ಲ. ಲಂಚವನ್ನು ತೆಗೆದುಕೊಂಡಿದ್ದಾರೆ. ಅದನ್ನು ಕೂಡ ಕಂಪ್ಲೇಂಟ್ ನಲ್ಲಿ ಕೊಟ್ಟಿದ್ದಾರೆ .....

ಅಧ್ಯಕ್ಷರು:- ಎನ್‌ಕ್ವಯರಿ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ:- ಅಧ್ಯಕ್ಷರೇ, ಅವರು ಹೇಳುವಂಥ ಯಾವುದೇ ಎನ್‌ಕ್ವಾಯರಿ ನಡೆಯುವುದಿಲ್ಲ. ಮುಚ್ಚುಹಾಕುವಂಥ ಎಲ್ಲಾ ಪ್ರಯತ್ನ ನಡೆದಿದೆ. ಅದು ಸರಿಯಾಗುವುದಿಲ್ಲ.

Mr. Speaker:- Mr. Sureshkumar you are the Deputy Leader.

ಈಶ್ವರಪ್ಪ ಇದ್ದಾರೆ. ನೀವು ಇಬ್ಬರು ಸಾಕ್ಷಿಗಳು, ಕನ್ನಡವನ್ನು ನಾವು ಅರ್ಥಮಾಡಿಕೊಳ್ಳಬೇಕು. ಅವರು ಏನು ಹೇಳಿದರು, ತಕ್ಷಣ ಡಿ.ಹೆಚ್.ಓ. ರವರು ಹೋಗಿದ್ದಾರೆ. ಆದರೂ ಕೂಡ ಇವರು ಕಂಪ್ಲೇಂಟ್ ಮಾಡಿರುವುದರಿಂದ ನರ್ಸಿಂಗ್ ಡಿಪಾರ್ಟ್‌ಮೆಂಟ್‌ದಲ್ಲಿರುವ ಒಬ್ಬ ಹಿರಿಯ ಅಧಿಕಾರಿಗಳನ್ನು ಕಳುಹಿಸಿ ಡಿಟೇಲ್ ಎನ್‌ಕ್ವಾಯರಿ ಮಾಡಿಸಿ ಏನಾದರೂ ಎಸ್ಟಾಬ್ಲಿಷ್ ಆಗಿದ್ದರೆ ಯಾವ ಕ್ರಮವನ್ನು ಬೇಕಾದರೂ ಅವರ ಮೇಲೆ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. Is it not satisfying? What else would you do tomorrow if you are the Minister? There should be an end to any problem? You should not try to drag on the issue.